

ಹಿಡಿಯಬಹುದು. ಅಂದರೆ 2–– 3 ವರ್ಷ ಈ ಅಗಲೀಕರಣದ ಗದ್ದಲ, ಕಿವಿಗಡಚಿಕ್ಕುವ ಸದ್ದು, ಹೊಗೆಯ ಮಾಲಿನ್ಯ, ಸಾವಿರಾರು ಕೆಲಸಗಾರರ ಉಪಸ್ಥಿತಿ ಆ ಇಡೀ ಪರಿಸರ ಸೂಕ್ಷ್ಮ ವಲಯವನ್ನು ಎಷ್ಟು ಆಕ್ರಮಿಸಿರುತ್ತದೆ ಎಂದರೆ ಕಾಡುಪ್ರಾಣಿಗಳು ರಾತ್ರಿ ಬಿಡಿ, ಹಗಲು ಕೂಡ ರಸ್ತೆ ದಾಟುವಂತೆ ಇಲ್ಲ, ನೆಮ್ಮದಿಯಿಂದ ಜೀವಿಸುವಂತೆಯೂ ಇಲ್ಲ. ಸಾವಿರಾರು ಅಪರೂಪದ ಮರಗಿಡಗಳ ಬುಡಕ್ಕೆ ಕೊಡಲಿಯೇಟು ಬೀಳುತ್ತದೆ. ಯೋಜನೆ ಕಾರ್ಯಗತವಾಗುವಾಗ ಈ ಜೈವಿಕ ಪರಿಸರದ ಸಹಜ ಬದುಕಿನ ಮೇಲಾಗುವ ಹಾನಿಯನ್ನು ಊಹೆ ಮಾಡಲು ನಾವಿನ್ನೂ ಸಮರ್ಥರಿಲ್ಲ.

## ಸಂಚಾರ ನಿಷೇಧದ ಹಿನ್ನೆಲೆ

ಗುಂಡ್ಲುಪೇಟೆ–– ಬಂಡೀಪುರ ಮಾರ್ಗವಾಗಿ ಕೇರಳವನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 212 (ಈಗ ಎನ್ ಎಚ್ 766) ಕೇರಳದ ಕೋಯಿಕ್ಕೋಡ್ ಅನ್ನು ಮೈಸೂರು ಮಾರ್ಗವಾಗಿ ಕೊಳ್ಳೇಗಾಲದೊಂದಿಗೆ ಸಂಪರ್ಕಿಸುತ್ತದೆ. ಒಟ್ಟು 272 ಕಿ.ಮೀ. ಉದ್ದದ ಈ ಹೆದ್ದಾರಿಯು 117 ಕಿ.ಮೀ. ಕೇರಳದಲ್ಲಿಯೂ, ಇನ್ನುಳಿದ 155 ಕಿ.ಮೀ. ಕರ್ನಾಟಕದಲ್ಲಿಯೂ ಹರಡಿಕೊಂಡಿದೆ. ಅದರಲ್ಲಿ 27 ಕಿ.ಮೀ. ಬಂಡೀಪುರದ ಎದೆ ಸೀಳಿಕೊಂಡು ಸಾಗಿದೆ. ವರ್ಷಗಳು ಉರುಳಿದಂತೆ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳ ಭರಾಟೆ ಹೆಚ್ಚುತ್ತಿದೆ. ಬರಿಯ ಬಸ್ಸು, ಕಾರುಗಳು ಮಾತ್ರವಲ್ಲ, ಕಾನೂನುಬಾಹಿರವಾಗಿ ಮರಳು ಸಾಗಿಸುವ ದೊಡ್ಡ ಟ್ರಕ್‌ಗಳು ಕೂಡಾ ಇಲ್ಲಿ ಓಡಾಡುತ್ತಿವೆ. ಒಟ್ಟಾರೆ ರಾತ್ರಿ ವೇಳೆಯಲ್ಲಿ ರಸ್ತೆ ದಾಟುವ ಕಾಡುಪ್ರಾಣಿಗಳ ಜೀವಕ್ಕೆ ಕುತ್ತು.

2004ರಿಂದ 2009ರವರೆಗೆ ಅಂದರೆ 6 ವರ್ಷಗಳ ಅವಧಿಯಲ್ಲಿ ಬಂಡೀಪುರದೊಳಗೆ ಸಾಗುವ ಹೆದ್ದಾರಿಯಲ್ಲಿ ಒಟ್ಟು 93 ಅಪಘಾತದ ಸಾವುಗಳು ಆಗಿದೆ. 2007ರಲ್ಲಿ 41 ಪ್ರಾಣಿಗಳು (ಅತಿ ಹೆಚ್ಚು) ಮತ್ತು 2004ರಲ್ಲಿ 32 ಪ್ರಾಣಿಗಳು ಸತ್ತಿವೆ ಎಂದರೆ ವಾಹನ ಸಂಚಾರದ ದುಷ್ಪರಿಣಾಮವನ್ನು ಊಹಿಸಬಹುದು.

ರಾತ್ರಿಯಿಡೀ ಓಡಾಡುವ ವಾಹನಗಳ ಕಣ್ಣುಕುಕ್ಕುವ ಬೆಳಕು, ಎಂಜಿನ್ ಸದ್ದು ಮತ್ತು ಜೋರಾಗಿ ಹಾರ್ನ್ ಮಾಡುವುದು ಕಾಡಿನ ನಿಶ್ಯಬ್ದವನ್ನು ಕಲಕಿ, ನಿದ್ರೆ ಹೋಗಬೇಕೆಂದಿರುವ ಅಥವಾ ಬೇಟೆಗೆ ಹೊರಡುವ ಕಾಡುಪ್ರಾಣಿಗಳ ವರ್ತನೆ ಮೇಲೆ ಊಹಿಸಲಾಗದ ದುಷ್ಪರಿಣಾಮ ಬೀರುತ್ತದೆ. ಅಲ್ಲದೇ ಈ ಅಭಯಾರಣ್ಯದ ಪ್ರಾಣಿಗಳು ಉತ್ತರ ಭಾರತದ ಅಭಯಾರಣ್ಯದ ಪ್ರಾಣಿಗಳಂತೆ ಅಲ್ಲ, ವಾಹನಗಳಿಗೆ ತುಂಬ ಸಂವೇದನಾಶೀಲವಾಗಿವೆ. ಹುಲಿ ಯೋಜನೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾಗಿದ್ದ ಡಾ. ರಾಜು ಅವರು ಈ ಬಗ್ಗೆ 2009ರಲ್ಲಿ ವಿವರವಾದ ಅಧ್ಯಯನ ವರದಿಯನ್ನು ನೀಡಿ, ರಾತ್ರಿ ಸಂಚಾರ ನಿಷೇಧಿಸಬೇಕೆಂದು ಚಾಮರಾಜನಗರದ ಜಿಲ್ಲಾಧಿಕಾರಿಯವರನ್ನು ಕೋರಿದ್ದರು. ವರದಿಯನ್ನು ಆಧರಿಸಿ ಆಗಿನ ಜಿಲ್ಲಾಧಿಕಾರಿ ಮನೋಜ್ ಕುಮಾರ್ ಮೀನಾ ರಾತ್ರಿ ಒಂಬತ್ತರಿಂದ ಬೆಳಗಿನ ಆರು ಗಂಟೆಯವರೆಗೆ ಬಂಡೀಪುರದೊಳಗೆ ಸಂಚಾರ ನಿಷೇಧ ಹೇರಿದರು.

ಆದರೆ ಆ ಸಮಯದಲ್ಲಿ ಕೇರಳ ಮತ್ತು ತಮಿಳುನಾಡು ಒತ್ತಡ ಹೇರಿದ್ದರಿಂದ ಕೆಲವೇ ದಿನಗಳಲ್ಲಿ ಅವರು ನಿಷೇಧವನ್ನು ಹಿಂಪಡೆಯಬೇಕಾಯಿತು. ಆಗ ಈ ಕುರಿತ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಕೈಗೆತ್ತಿಕೊಂಡ ಕರ್ನಾಟಕ ಹೈಕೋರ್ಟ್ ನಿಷೇಧವನ್ನು

**ಸಂಚಕಾರ ಇರುವುದು ರಾತ್ರಿ ಓಡಾಡುವ ಪ್ರಾಣಿಗಳಿಗೆ ಮಾತ್ರವಲ್ಲ, ಇಷ್ಟೆಲ್ಲ ವಾಹನಗಳು ಎಡೆಬಿಡದೆ ಸಾಗುತ್ತಿದ್ದರೆ ಹಗಲು ಓಡಾಡುವ ಪ್ರಾಣಿಗಳು ಏನು ಮಾಡಬೇಕು?**